# ಉಪತಹಶೀಲ್ದಾರರು, ಹಿರೇಹಡಗಲಿ ಇವರ ನ್ಯಾಯಾಲಯದಲ್ಲಿ

| **ಅರ್ಜಿದಾರರು** | **ತಕರಾರುದಾರರು** |
|---|---|
| 1.ಶ್ರೀ ಮಳಲಿ ಮಹಾಸಂಸ್ಥಾನ ಮಠ ಸಿಂಹಾಸನಾಧೀಶ್ವರ ಶ್ರೀ ಶ್ರೀ ನಾಗಭೂಷಣ ಶಿವಾಚಾರ್ಯ ಮಹಾಸ್ವಾಮಿ, ನೊಣಬೂರು ಗ್ರಾಮ, ತಿರ್ಥಹಳ್ಳಿ ತಾ., ಶಿವಮೊಗ್ಗ ಜಿಲ್ಲೆ<br>2.ನಾಗಾರ್ಜುನ ಹಾವನೂರು ತಂದೆ ಹಾಲಪ್ಪ ಹಾವನೂರು , ಬೆಲೂರು ಗ್ರಾಮ, ರಾಣೆಬೆನ್ನೂರು ತಾ.<br>{ಶ್ರೀ ಎಸ್.ಶಿವಲಿಂಗಪ್ಪ, ವಕೀಲರು, ಹಡಗಲಿ} | ಸುಣಗಾರ ಶಂಕ್ರಪ್ಪ ತಂದೆ ಸುಣಗಾರ ತಿಮ್ಮಪ್ಪ, ಹ್ಯಾರಡ ಗ್ರಾಮ, ಹಡಗಲಿ ತಾ.<br>{ಶ್ರೀ ಹೆಚ್.ನಾಗೇಶ್, ವಕೀಲರು, ಹಡಗಲಿ} |

ವಿವಾದಿತ ಜಮೀನಿನ ವಿವರ:

| ಕ್ರ.ಸಂ. | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ | ತರಹೆ |
|---|---|---|---|---|
| 1. | ಹ್ಯಾರಡ | 214/ಸಿ | 1–70 | ಖುಷ್ಕಿ |
| 2. | ,, | 215/ಎ | 1–57 | ,, |
| 3. | ,, | 219/ಎ | 1–78 | ,, |
| 4. | ,, | 219/ಡಿ | 3–91 | ,, |
| 5. | ,, | 220/ಬಿ | 0–24 | ,, |

**ಪೀಠಿಕೆ:–**

ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಹ್ಯಾರಡ ಗ್ರಾಮದ ಮೇಲ್ಕಂಡ ಜಮೀನಿಗೆ ಸಂಬಂಧಿಸಿದಂತೆ, ಶ್ರೀ ಮಳಲಿ ಮಹಾಸಂಸ್ಥಾನ ಮಠ ಸಿಂಹಾಸನಾಧೀಶ್ವರ ಶ್ರೀ ಶ್ರೀ ನಾಗಭೂಷಣ ಶಿವಾಚಾರ್ಯ ಮಹಾಸ್ವಾಮಿ, ನೊಣಬೂರು ಗ್ರಾಮ, ತಿರ್ಥಹಳ್ಳಿ ತಾ., ಶಿವಮೊಗ್ಗ ಜಿಲೆ ಇವರು ನಾಗಾರ್ಜುನ ಹಾವನೂರು ತಂದೆ ಹಾಲಪ್ಪ ಹಾವನೂರು , ಬೆಲೂರು ಗ್ರಾಮ, ರಾಣೆಬೆನ್ನೂರು ತಾ. ಇವರಿಗೆ ನೋಂದಾಯಿತ ದಸ್ತಾವೇಜು ಸಂ.1491/2011–12 ದಿ:18–8–2011 ರಂದು ರೂ.4,85,000/– ಗಳಿಗೆ ಕ್ರಯಕ್ಕೆ ನೀಡಿರುತ್ತಾರೆ. ಗ್ರಾಮದಲ್ಲಿ ನಮೂನೆ–21 ರ ನೋಟೀಸು ದಿ:24–8–2011 ರಂದು ಜಾರಿ ಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿ:16–9–2011 ರಂದು ಸುಣಗಾರ ಶಂಕ್ರಪ್ಪ ತಂದೆ ಸುಣಗಾರ ತಿಮ್ಮಪ್ಪ, ಹ್ಯಾರಡ ಇವರು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಾರಣ ಎಂ.ಆರ್.ಸಂಖ್ಯೆ 23/2011–12 ರ ಕಡತವು ತಕರಾರು ಕಡತವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಹಿರೇಹಡಗಲಿ ರವರು ಈ ಕಾರ್ಯಾಲಯಕ್ಕೆ ವಿಚಾರಣೆಗೆ ಸಲ್ಲಿಸಿರುತ್ತಾರೆ. ಉಭಯ ಪಕ್ಷದವರಿಗೆ ಕೇಳಿಕೊಳ್ಳುವ ಅವಕಾಶ ನೀಡಿ ದಿ:24–10–2011 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸ್ ನೀಡಲಾಯಿತು.

ಅರ್ಜಿದಾರರು ಮತ್ತು ತಕರಾರುದಾರರು ಸದರಿ ಪ್ರಕರಣದ ವಿಚಾರಣೆಗೆ ಹಾಜರಾಗಿರುತ್ತಾರೆ. ಅರ್ಜಿದಾರರ ಪರ ವಕೀಲರು ಹಾಜರಾಗಿ ಕ್ರಯಪತ್ರಗಳು, ಖಾತಾ ಉತಾರು, ದಿ:14–5–81 ರ ದಾನಪತ್ರ, ಮ್ಯುಟೇಷನ್ ಪ್ರತಿ, ವಾದಿಯವರ ಅದಾಯ ಪ್ರಮಾಣ ಪತ್ರ, ಐಎಲ್ಆರ್.1998 ಕೆಎಆರ್ 1554 ರ ಪ್ರತಿಗಳನ್ನು ಸಲ್ಲಿಸಿರುತ್ತಾರೆ. ವಾದಿಪರ ಹಕ್ಕು ಬದಲಾವಣೆ ಮಾಡಲು ಆದೇಶ ಮಾಡಲು ಕೋರಿದರು. ತಕರಾರುದಾರರು ವಿಚಾರನೆ ವೇಳೆ ಯಾವುದೇ ಹೇಳಿಕೆ ಅಥವಾ ದಾಖಲೆಗಳನ್ನು ನೀಡಿರುವುದಿಲ್ಲ. ಅರ್ಜಿದಾರ–1 ರವರ ಹೆಸರಿನಲ್ಲಿ ಹಾಲಿ ಪಹಣಿಗಳು ನಮೂದು ಇರುತ್ತವೆ. ಸದರಿ ಜಮೀನುಗಳನ್ನು ನೋಂದಾಯಿತ ದಸ್ತಾವೇಜು ಸಂ.137/1981–82 ದಿ:14–5–1981 ರಂದು ಸುಣಗರ ರಾಮಪ್ಪನ ಮಗ ಹನುಮಪ್ಪ, ಈತನ ಹೆಂಡತಿ ಲಕ್ಷ್ಮವ್ವ ಇವರು ಅರ್ಜಿದಾರ–1 ರವರಿಗೆ ದಾನಪತ್ರದ ಮೂಲಕ ನೀಡಿರುತ್ತಾರೆ. ಅರ್ಜಿದಾರ–2 ರವರ ತಂದೆಯ ಹೆಸರಿಗೆ ಬೇಲೂರು ಗ್ರಾಮದ ಸ.ನಂ.50/1ಅ ವಿ:2–17 ಎಕ್ರೆ ಹೊಂದಿರುತ್ತಾರೆ. ತಕರಾರುದಾರರು ಮೇಲ್ಕಂಡ ಜಮಿನುಗಳ ಹಕ್ಕು ಬದಲಾವಣೆ ಮಾಡಬಾರದೆಂದು ಕೋರಿ ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಆದರೆ ಕಾರಣವನ್ನು ತಿಳಿಸಿರುವುದಿಲ್ಲ ಮತ್ತು ತಮ್ಮ ಹಕ್ಕನ್ನು ಸಾಭೀತುಪಡಿಸುವ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ, ತಕರಾರುದಾರರು ತಮ್ಮ ಹಕ್ಕನ್ನು ಸಾಭೀತುಪಡಿಸಿಕೊಳ್ಳುವ ಅವಶ್ಯಕತೆ. ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ಪಹಣಿ/ವಿವಾದ/12/11–12 ದಿನಾಂಕ:17–10–2016 .

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳು ಹಾಗೂ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129 ರ ಪ್ರಕಾರ ಎಂ.ಆರ್.ಸಂಖ್ಯೆ 23/2011–12ರ ಪ್ರಕರಣದಲ್ಲಿ ಅರ್ಜಿದಾರರ ಅರ್ಜಿಯನ್ನು ಪುರಸ್ಕರಿಸುತ್ತಾ ನೋಂದಾಯಿತ ಕ್ರಯಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ. ತಕರಾರುದರರು ತಮ್ಮ ಹಕ್ಕನ್ನು ಸಿವಿಲ್ ನ್ಯಾಯಾಲಯದಲ್ಲಿ ಸ್ಥಿರಪಡಿಸಿಕೊಂಡು ಪರಿಹರ ಕಂಡುಕೊಳ್ಳಲು ಆದೇಶಿಸಿದೆ.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,
ಹಿರೇಹಡಗಲಿ.

ಪ್ರತಿಯನ್ನು

1. ವಾದಿ ಮತ್ತು ಪ್ರತಿವಾದಿಗಳಿಗೆ
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹೂವಿನಹಡಗಲಿ ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ಕಛೇರಿ ಕಡತಕ್ಕೆ ಶುದ್ಧಪ್ರತಿ.